1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ :– ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರಗಳು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):

ಮಾನ್ಯ ಸಭಾಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆ ಕೊಟ್ಟಿದ್ದೆವು.

ಅಧ್ಯಕ್ಷರು : ಆಮೇಲೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಆಮೇಲೆ ಕೊಡಿ ಸಾರ್. ಆದರೆ, Rule 69 ಅಡಿಯಲ್ಲಿ discussion ಗೆ ಕೊಡಿ.

ಅಧ್ಯಕ್ಷರು : ಆಯಿತು ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು specific ಆಗಿ discussion ಮಾಡುವ ಅವಶ್ಯಕತೆ ಇದೆ.

ಅಧ್ಯಕ್ಷರು : ನನ್ನ request, ವಿನಂತಿ.

ಶ್ರೀ ಜಗದೀಶ್ ಶೆಟ್ಟರ್ : ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಒಂದೂ demand ಕೂಡ ಆಗಿಲ್ಲ. 3 ದಿವಸ ಆಯಿತು.

ಶ್ರೀ ಜಗದೀಶ್ ಶೆಟ್ಟರ್ : Co-operation ಕೊಡುತ್ತೇವೆ.

ಅಧ್ಯಕ್ಷರು : ಕೊಡುತ್ತೇನೆ. ಖಂಡಿತ.

ಶ್ರೀ ಜಗದೀಶ್ ಶೆಟ್ಟರ್ : Rule 69ರ ಅಡಿಯಲ್ಲಿ ಕೊಡಿ.

ಅಧ್ಯಕ್ಷರು : ಕೊಡುತ್ತೇನೆ, ಆಯಿತು, ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ : ನಾವೂ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಾಡಹಗಲೇ ಕೊಲೆಯಾಗುತ್ತಿದೆ.

ಅಧ್ಯಕ್ಷರು : ಕಾಗೇರಿಯವರೆ, ನೀವು ಸರ್ಕಾರ ನಡೆಸಿದವರು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು): ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ಆರ್.ವಿ. ದೇಶಪಾಂಡೆ: ಚರ್ಚೆಯನ್ನೇ ಶುರು ಮಾಡಿಲ್ಲ. ಸರ್ಕಾರ ವಿಫಲವಾಗಿದೆ ಎಂದರೆ ತಪ್ಪಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಕುಮಾರಸ್ವಾಮಿಯವರೆ, ದಯವಿಟ್ಟು, ಆಮೇಲೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು : 3 ದಿವಸಗಳಾಯಿತು. ಒಂದೂ demand pass ಆಗಲಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ: ಬೆಂಗಳೂರು ನಗರದಲ್ಲಿ ಕಸದ ಸಮಸ್ಯೆ ಬಗ್ಗೆ.

(ಗೊಂದಲ)

ಅಧ್ಯಕ್ಷರು: ಇಲ್ಲವೆಂದರೆ, ನಾನೂ straightaway demand ಅನ್ನು voteಗೆ ಹಾಕಿಬಿಡುತ್ತೇನೆ. ನಾನು ಈಗಲೇ ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ಅಶೋಕ್ : ಸಾರ್, ಇನ್ನೂ ಸಮಯವಿದೆ. ನಿಲುವಳಿ ಸೂಚನೆ ಮೊದಲು ತೆಗೆದುಕೊಳ್ಳಿ.

ಅಧ್ಯಕ್ಷರು : ಕೊಡುತ್ತೇನೆ.

ಶ್ರೀ ಆರ್.ಅಶೋಕ್ : ಇನ್ನೂ 4–5 ನಿಲುವಳಿ ಸೂಚನೆ ಬರಬಹುದು.

ಅಧ್ಯಕ್ಷರು: ಕೊಡೋಣ.

ಶ್ರೀ ಆರ್.ಅಶೋಕ್ : ಅದಕ್ಕೇ ನಾನು ಪ್ರಸ್ತಾಪ ಮಾಡಿಬಿಡುತ್ತೇನೆ. ಎರಡು ನಿಮಿಷ ಮಾತನಾಡಿಬಿಡುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,. . . .

ಶ್ರೀ ಆರ್. ಅಶೋಕ್ : ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ. . . . .

ಶ್ರೀ ಟಿ.ಬಿ. ಜಯಚಂದ್ರ : ಈಗ ನಿಲುವಳಿ ಸೂಚನೆಯನ್ನೇನು ತಂದಿದ್ದಾರೆ, ದಯಮಾಡಿ ತಾವು ನೋಡಿ. ತಾವು Home Minister ಆಗಿದ್ದವರು. ಅದು Law and Order ವಿಚಾರ.

ಶ್ರೀ ಆರ್. ಅಶೋಕ್ : ನಾವೇನಾದರೂ ತಪ್ಪು ತಂದಿದ್ದರೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : Law and Order ವಿಚಾರವನ್ನು Adjournment Motion ನಲ್ಲಿ ತರುವ ಪ್ರಸ್ತಾವ ಇದೆಯೇ ?

ಶ್ರೀ ಆರ್.ಅಶೋಕ್: ಹೌದು, ಕಾನೂನು ಸುವ್ಯವಸ್ಥೆ ವಿಚಾರವಿದೆ.

(ಗೊಂದಲ)

ಅಧ್ಯಕ್ಷರು : ಅಶೋಕ್‌ರವರೆ,. . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ತಾವೂ ಸರ್ಕಾರ ನಡೆಸಿದ್ದೀರಿ.

(ಗೊಂದಲ)

ಶ್ರೀ ಆರ್. ಅಶೋಕ್ : ಪ್ರತಿ ದಿನ ಮಾಧ್ಯಮಗಳಲ್ಲಿ ರಾಜ್ಯದಲ್ಲಿ ಕಾನೂನು ಇದೆಯೇ? ಸತ್ತಿದೆಯೇ? ಎಂದು ಬರುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ಸಾಮಾನ್ಯವಾಗಿ ಯಾವತ್ತೂ ಕೂಡ Law and Order ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಿದೆಯೇ ?

(ಗೊಂದಲ)

ಶ್ರೀ ಆರ್. ಅಶೋಕ್ : IPS ಅಧಿಕಾರಿಗಳು ರೋಡ್‌ನಲ್ಲಿ ನಿಂತು ಜಗಳ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ notice ನೋಡಿ. ನೀವು ಯಾವ ವಿಚಾರ ಪ್ರಸ್ತಾಪ ಮಾಡಿದ್ದೀರಿ ?

(ಗೊಂದಲ)

ಅಧ್ಯಕ್ಷರು : ನಾನು ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ್ : ಇವತ್ತು ಬಂದೀಖಾನೆಗಳಲ್ಲಿ ಮಂಗಳೂರಿನಲ್ಲಿ 20 ಜನ ಪೊಲೀಸ್ ಅಧಿಕಾರಿಗಳು. . . .

(ಗೊಂದಲ)

ಶ್ರೀ ಆರ್. ಅಶೋಕ್ : Night life ಅವಧಿ ಜಾಸ್ತಿ ಮಾಡಿ ಕುಡಿಯುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಬೇರೆ ರೂಪದಲ್ಲಿ ಚರ್ಚೆ ಮಾಡಿ.

(ಗೊಂದಲ)

ಶ್ರೀ ಆರ್. ಅಶೋಕ್ : ಒಂದು ಗಂಟೆಯವರೆಗೆ ತೆರೆದು ರಸ್ತೆ ರಸ್ತೆಯಲ್ಲಿ ಗಲಾಟೆಯಾಗುತ್ತಿದೆ.

(ಗೊಂದಲ)

ಅಧ್ಯಕ್ಷರು : ತಮ್ಮ Notice . . . .

(ಗೊಂದಲ)

ಶ್ರೀ ಆರ್. ಅಶೋಕ್ : ಪ್ರಜಾವಾಣಿಯ editorial ನಲ್ಲಿ ಬರೆದಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಆರ್. ಅಶೋಕ್ : ಅವಕಾಶ ಕೊಡಿ.

(ಗೊಂದಲ)

ಆಧ್ಯಕ್ಷರು : ಆಯಿತು ಬಿಡಿ. ಅವರೇನು ಮಾತನಾಡುತ್ತಾರೆ ಮಾತನಾಡಿಕೊಳ್ಳಲಿ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವಿಷಯ ಪ್ರಸ್ತಾವನೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಆರ್. ಅಶೋಕ್(ಪದ್ಮನಾಭನಗರ) : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದು ಎಲ್ಲ ಕಡೆ ಎದ್ದುಕಾಣುತ್ತಿದೆ. ಇವತ್ತು IPS ಅಧಿಕಾರಿಗಳು ಯಾವ ರೀತಿಯಾಗಿ ನಡೆದುಕೊಳ್ಳಬೇಕಾಗಿತ್ತು ? ಕಾಂಗ್ರೆಸ್‌ಗೆ ಕರ್ನಾಟಕದಲ್ಲಿ 60 ವರ್ಷಗಳ ಇತಿಹಾಸವಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಕಾಂಗ್ರೆಸ್‌ಗೆ 129 ವರ್ಷಗಳ ಇತಿಹಾಸವಿದೆ.

ಶ್ರೀ ಆರ್. ಅಶೋಕ್ : ಒಂದು ಆಡಳಿತ, ಮಿಲಿಟರಿ ಬಿಟ್ಟರೆ ಪೊಲೀಸ್ ಇಲಾಖೆಯಲ್ಲಿ ಹೆಚ್ಚು ಶಿಸ್ತು ಇದೆ. Uniform ಇರುವ ಒಂದು ಇಲಾಖೆಯದು. 1200 ಜನ ರಸ್ತೆಗೆ ಬಂದು ಬಸ್ಸುಗಳಿಗೆ ಕಲ್ಲು ಹೊಡೆದು, ರಸ್ತೆಗಳಲ್ಲಿ ಬೆಂಕಿ ಹಚ್ಚಿ ಗಲಾಟೆ ಮಾಡುತ್ತಿದ್ದಾರೆ, ಎಲ್ಲ ಕಡೆ ಧರಣಿ ಮಾಡುತ್ತಿದ್ದಾರೆ. ಯಾವ ಪೊಲೀಸರು dress ಹಾಕಿಕೊಂಡು ಕಾನೂನನ್ನು ಕಾಪಾಡಬೇಕಾಗಿತ್ತು ಅವರೇ ರಸ್ತೆ, ಬೀದಿಗೆ ಇಳಿದು ಹೊಡೆದಾಟ, ಗಲಭೆ ಮಾಡುತ್ತಾರೆ ಅಂದರೆ, ಈ ರಾಜ್ಯದಲ್ಲಿ ಕಾನೂನು ಇದೆಯೇ? ಅದೂ ಒಬ್ಬರಲ್ಲ. 5 ಜನ, 10 ಜನ ಮಾಡಿದ್ದಾರೆಯೇ ಎಂದರೆ ಅಲ್ಲ. 1200 ಜನ ಪೊಲೀಸ್ ಅಧಿಕಾರಿಗಳು, constableಗಳು ರಸ್ತೆಗೆ ಇಳಿದು ಧರಣಿ, ಗಲಭೆ ಮಾಡಿದ್ದಾರೆ. ಇವತ್ತು ಮಂಗಳೂರಿನ ಒಂದು ಕಾರಾಗೃಹದೊಳಗೆ ನಡೆದ ಘಟನೆ ಬಗ್ಗೆ ಪ್ರಜಾವಾಣಿಯ editorial ನಲ್ಲಿ ಈ ರೀತಿ ಬಂದಿದೆ :

ನಗೆಪಾಟಲು, ಅದಕ್ಕಿಂತ ಹೆಚ್ಚಾಗಿ ನಾಚಿಕೆಗೇಡು, ಮಂಗಳೂರಿನ ಕಾರಾಗೃಹದೊಳಗೆ ಖೈದಿಗಳ ಗುಂಪೊಂದು ಸಹಾಯಕ ಪೊಲೀಸ್ ಕಮಿಷನರ್, inspector, constable ಗಳ ಮೇಲೆ ಕೈ ಮಾಡಿ ಗಾಯಗೊಳಿಸಿದ್ದು, ಇದಕ್ಕಿಂತ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಈ ಪ್ರಸಂಗ ನಮ್ಮ ಪೊಲೀಸ್ ಕೌಶಲ್ಯ, ಕಾರ್ಯತತ್ಪರತೆ, ಸಮಯ ಪ್ರಜ್ಞೆ ಬಗ್ಗೆ ಅಪನಂಬಿಕೆ ಹುಟ್ಟುಹಾಕಿದೆ.ಇಲ್ಲೊಂದು ಅಘಾತಕಾರಿ ಅಂಶವೂ ಇದೆ. ಜೈಲಿನ barrack ನಲ್ಲಿ ಗಲಾಟೆ ನಡೆದಾಗ ಇದ್ದ ಖೈದಿಗಳ ಸಂಖ್ಯೆ 28, ಅವರನ್ನು ಹದ್ದುಬಸ್ತಿನಲ್ಲಿಡಲು ಸಮವಸ್ತ್ರದಲ್ಲಿ ಹೋದವರ

ಸಂಖ್ಯೆ 30. ಇದರಲ್ಲಿ 20 ಪೊಲೀಸರು ಏಟು ತಿಂದಿದ್ದಾರೆ. ಅಂದರೆ, ನಾವು ಹೊರಗಡೆ ಗಲಾಟೆಯಾಗುವುದನ್ನು ನೋಡಿದ್ದೇವೆ. ಇವತ್ತು ಮಂಗಳೂರಿನ ಕಾರಾಗೃಹದೊಳಗಡೆಯೇ ಪೊಲೀಸ್ ಅಧಿಕಾರಿಗಳನ್ನು ಖೈದಿಗಳು ಹಿಡಿದುಕೊಂಡು ನುಣ್ಣಗೆ ಅವರನ್ನು ಚಚ್ಚಿಹಾಕುತ್ತಾರೆಂದರೆ, ರಾಜ್ಯದಲ್ಲಿ ಕಾನೂನು ಇದೆಯೇ ಎಂದು ಕೇಳುತ್ತಿದ್ದೇನೆ. ಇದನ್ನೆಲ್ಲ ನೋಡಿದರೆ, ರಾಜ್ಯದಲ್ಲಿ ಕಾಯ್ದೆ ಮತ್ತು ಸುವ್ಯವಸ್ಥೆ ಕುಸಿಯುತ್ತಿದೆ. ಇಂಥ ಸಂದರ್ಭವನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಪೊಲೀಸರಿಗೆ ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ. ಇದು ಬಹಳ important ಸರ್ಕಾರದಿಂದ ಪೊಲೀಸ್ ಇಲಾಖೆಗೆ ಏನು ಮಾರ್ಗದರ್ಶನ ಹೋಗಬೇಕಾಗಿತ್ತೋ ಅದು ಹೋಗುತ್ತಿಲ್ಲ. ಅದು ಬಹಳ ಮುಖ್ಯವಾದಂಥ ವಿಚಾರ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇವರ ದೌರ್ಬಲ್ಯವನ್ನು ಪ್ರದರ್ಶಿಸಿ ಇಡೀ ಇಲಾಖೆ ತಲೆತಗ್ಗಿಸುವಂತೆ ಮಾಡುತ್ತದೆ. ಜೈಲಿನೊಳಗೆ ಪುಂಡಾಟಿಕೆ ನಡೆಸಬಹುದಾದ ಇಂಥ ದಾಷ್ಟ್ಯವನ್ನು ಮೂಲದಲ್ಲಿಯೇ ಚುವುಟಿ ಹಾಕಬೇಕು. ಯಾರೇ ಆಗಲಿ. ನಮ್ಮ ಸರ್ಕಾರ ಇತ್ತು, ನಿಮ್ಮ ಸರ್ಕಾರ ಬಂತು, ಮುಂದೆ ಯಾವ ಸರ್ಕಾರ ಬರುತ್ತದೆ ಅದು ಬೇರೆ ಪ್ರಶ್ನೆ. ಆದರೆ, ಪೊಲೀಸ್ ಇಲಾಖೆಗೆ ಒಂದು ಗೌರವವಿದೆ. 60 ವರ್ಷಗಳಲ್ಲಿ, ಬ್ರಿಟಿಷರು ಇದ್ದಾಗಿನಿಂದ ತೆಗೆದುಕೊಂಡು ಪೊಲೀಸ್ ಇಲಾಖೆಯಲ್ಲಿ ಒಂದು ಶಿಸ್ತು ಬಂದಿದೆ. ಯಾರು ಕಾನೂನನ್ನು ಕಾಪಾಡಬೇಕು ? ನಮ್ಮ Home Minister ಯಾವುದೋ ಒಂದು parking place ನಲ್ಲಿ ಗಾಡಿ ನಿಲ್ಲಿಸಿದಾಗ..

ಅಧ್ಯಕ್ಷರು : ಹಾಗೆ ಹೋಗಬೇಡಿ.

ಶ್ರೀ ಆರ್. ಅಶೋಕ್ : ಅವರನ್ನು ಪ್ರಶಂಸೆ ಮಾಡುತ್ತಿದ್ದೇನೆ. Police constable ಒಬ್ಬರನ್ನು ನೀವು ಕರೆದು ಅವರಿಗೆ ಗೌರವ ಕೊಡುತ್ತೀರಿ. ನಾನು ನಿಮ್ಮನ್ನು appreciate ಮಾಡುತ್ತೇನೆ. ಯಾರೇ ದೊಡ್ಡವರಾದರೂ ಕಾನೂನಿಗಿಂತ ಮೇಲೆ ಅಲ್ಲ ಎನ್ನುವುದನ್ನು ತಾವು ಅವತ್ತು prove ಮಾಡಿದ್ದೀರಿ. ಅದಕ್ಕೆ ನಾನು ನಿಮಗೆ ಗೌರವ ಕೊಡುತ್ತೇನೆ, ನಿಮ್ಮನ್ನು ನಾನು appreciate ಮಾಡುತ್ತೇನೆ. ಅದೇರೀತಿ ADGP ರವೀಂದ್ರನಾಥ ಪ್ರಕರಣವೇನಾಯಿತು ? ತಾವು ನೋಡಿ. ಒಂದು ವಾರ ಅದು serial ರೀತಿ ಬಂತು. ಒಬ್ಬ ಅಧಿಕಾರಿ ಕೆಲಸ ಮಾಡುವಂಥ

ಟೈಂನಲ್ಲಿ coffee shop ನಲ್ಲಿ ಹೋಗಿ ಕುಳಿತುಕೊಳ್ಳುವುದೇ ಅಪರಾಧ. ಮೊನ್ನೆ ಕೇಂದ್ರ ಸರ್ಕಾರದಲ್ಲಿ ನೋಡಿದ್ದೇವೆ. ಯಾರ್ಯಾರು Golf club ಗಳಲ್ಲಿ duty hours ನಲ್ಲಿ ಹೋಗಿ golf ಆಡುತ್ತಿದ್ದರು ಅವರ list ತೆಗೆದುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ನೀವು ಸಂಕ್ಷಿಪ್ತವಾಗಿ 2–3 ಪ್ರಕರಣಗಳನ್ನು ಗುರುತುಪಡಿಸಿದ್ದೀರಿ. ಇವುಗಳಿಗೆ ಸಮರ್ಥವಾದ ಉತ್ತರ ಸರ್ಕಾರದಿಂದ ಬರಬೇಕಾದಂಥ ಅಗತ್ಯವಿದೆ. ಅದಕ್ಕೆ ನಾನು straightaway ನಿಯಮ 69ರ ಅಡಿಯಲ್ಲಿ ಚರ್ಚೆಗೆ ಹಾಕಿಬಿಡುತ್ತೇನೆ.

ಶ್ರೀ ಆರ್. ಅಶೋಕ್ : ಬಂಡೆ ಪ್ರಕರಣದಲ್ಲಿಯೂ ಅಷ್ಟೇ, ಗೃಹ ಸಚಿವರು ಬೆಳಗಾವಿನಲ್ಲಿ ಒಂದು statement ಅನ್ನು ಕೊಟ್ಟರು. ಭೂಗತ ಪಾತಕದ ಸಂಬಂಧವಿರುವ ಒಬ್ಬ ಅಪರಾಧಿ ಪೊಲೀಸರ ಸಾವಿಗೆ ಅಂದರೆ SI ಬಂಡೆ ಸಾವಿಗೆ ಕಾರಣವೆಂದು statement ಕೊಟ್ಟರು. COD report ನಲ್ಲಿ, ಪೊಲೀಸರ ಗುಂಡಿನಿಂದಲೇ ಬಂಡೆ ಸಾವಾಗಿದೆ ಎಂದು ಬಂದಿದೆ. ಇಲ್ಲಿ ಪೊಲೀಸರ ಗುಂಡಿನಿಂದಲೇ ಸತ್ತಿದ್ದಾರೆಂದರೆ ಅದು ಯಾವ ಗುಂಡು ? ಯಾರು ಹಾರಿಸಿದರು ? ರವೀಂದ್ರನಾಥ ಪ್ರಕರಣ, ಬಂಡೆ ಪ್ರಕರಣ ಇರಬಹುದು ಅಥವಾ ಮಂಗಳೂರಿನಲ್ಲಾಗಿರುವಂಥ ಆ ಘಟನೆ ಈ 3 ಘಟನೆಗಳನ್ನು ನೋಡಿದಾಗ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ ಎನಿಸುತ್ತದೆ. ಇದನ್ನು ಕೇಳುವವರೇ ಇಲ್ಲ. ಇದನ್ನು ನಾನು ಹೇಳುತ್ತಿಲ್ಲ. ಇದು ಪ್ರಜಾವಾಣಿಯ editorial ನಲ್ಲಿ ಬಂದಿದೆ. ಆ ದೃಷ್ಟಿಯಿಂದ ದಯವಿಟ್ಟು ಇದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಖಂಡಿತ. ನಿಯಮ 69ರಲ್ಲಿ ತೆಗೆದುಕೊಳ್ಳೋಣ. ನಾಳೆ, ತಪ್ಪಿದರೆ ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ನಾಳೆ ಮಧ್ಯಾಹ್ನ ಅವಕಾಶ ಕೊಡಿ. ಪ್ರಶ್ನೋತ್ತರ ಆದಮೇಲೆ ಕೊಡಿ.

ಅಧ್ಯಕ್ಷರು : O.K. ಪ್ರಶ್ನೋತ್ತರದಲ್ಲಿ ಬೇಡ. ಅದಾದಮೇಲೆ ಕೊಡೋಣ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)(ಕುಳಿತುಕೊಂಡು):– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಹೇಳಿದೆ, ಕೇಳುವುದಿಲ್ಲವಲ್ಲ ?

ಶ್ರೀ ಸಿದ್ದರಾಮಯ್ಯ : Adjournment motion move ಮಾಡಿ discussion ಮಾಡುವುದಕ್ಕೆ ಬರುವುದಿಲ್ಲ. preliminary submission ಮಾಡಿ.

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರು ತೀರ್ಮಾನ ತೆಗೆದುಕೊಳ್ಳುತ್ತಾರೆ. ನೋಡಿದರೆ, ತಾವು detail ಆಗಿ discussion ಮಾಡುತ್ತಿದ್ದೀರಿ.

ಶ್ರೀ ಕೆ.ಜೆ. ಜಾರ್ಜ್(ಗೃಹ ಸಚಿವರು): Detail ಆಗಿ discussion ಮಾಡಿದರೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಇಲ್ಲಿದ್ದಾಗ preliminary submission ನಲ್ಲಿ ಒಂದೊಂದು ತಾಸು ಮಾತನಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಒಂದೊಂದು ತಾಸು ? 2 ನಿಮಿಷಗಳಿಗಿಂತ ಹೆಚ್ಚಿಗೆ ನಾನು ಮಾಡಿಯೇ ಇಲ್ಲ.

(ಗೊಂದಲ)

2. ಪ್ರಶ್ನೋತ್ತರ.

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಡೀಮ್ಡ್ ವಿಶ್ವವಿದ್ಯಾಲಯಗಳ ಪರಿಕಲ್ಪನೆ

31(331) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–